सत्यमेव जयते


ರಾಜೀವ್ ಚಂದ್ರಶೇಖರ್

ಸಂಸತ್ ಸದಸ್ಯರು


08 ಜೂನ್ 2018

***ಮಾನ್ಯ ಶ್ರೀ ಕುಮಾರಸ್ವಾಮಿ ಅವರೇ,***

**ವಿಷಯ: –** ಬೆಂಗಳೂರಿನ ರಾಷ್ಟ್ರೀಯ ಸೈನಿಕ ಸ್ಮಾರಕದ ಶೋಚನೀಯ ಪರಿಸ್ಥಿತಿ

ಕರ್ನಾಟಕದ ಮುಖ್ಯಮಂತ್ರಿಯಾಗಿ ತಾವು ಅಧಿಕಾರ ವಹಿಸಿಕೊಂಡಿರುವ ಈ ಸಂದರ್ಭದಲ್ಲಿ ಮೇಲ್ಕಂಡ ವಿಷಯವನ್ನು ನಿಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ರಾಷ್ಟ್ರೀಯ ಸೈನಿಕ ಸ್ಮಾರಕ ಸಮಿತಿ ಮತ್ತು ದತ್ತಿಗೆ ನಾನು 12 ಜೂನ್ 2015ರಲ್ಲೇ ರಾಜೀನಾಮೆ ಸಲ್ಲಿಸಿದ್ದರೂ, ಒಬ್ಬ ನಾಗರೀಕನಾಗಿ ಮತ್ತು ರಾಷ್ಟ್ರೀಯ ಸೈನಿಕ ಸ್ಮಾರಕದ ನಿರ್ಮಾಣದ ನೇತೃತ್ವ ವಹಿಸಿದ್ದವನಾಗಿ ಸ್ಮಾರಕದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ನಿಮಗೆ ತಿಳಿಸಲು ಈ ಪತ್ರ ಬರೆಯುತ್ತಿದ್ದೇನೆ.

ತಮಗೆ ತಿಳಿದಿರುವಂತೆ, ರಾಷ್ಟ್ರೀಯ ಸೈನಿಕ ಸ್ಮಾರಕವು ಕರ್ನಾಟಕ ರಾಜ್ಯ ಸರ್ಕಾರದ ಒಂದು ಪ್ರತಿಷ್ಠಿತ ಯೋಜನೆಯಾಗಿದೆ. ದೇಶಕ್ಕಾಗಿ ಪ್ರಾಣತ್ಯಾಗ ಮಾಡಿದ ಹುತಾತ್ಮ ಯೋಧರಿಗೆ ಗೌರವ ಸಲ್ಲಿಸುವ ಸಲುವಾಗಿ ಕೈಗೆತ್ತಿಕೂಂಡ ಈ ಯೋಜನೆಗೆ ಫೆಬ್ರವರಿ 10, 2009 ರಂದು ಅಂದಿನ ಘನತೆವೆತ್ತ ರಾಜ್ಯಪಾಲರಾದ ಶ್ರೀ ರಾಮೇಶ್ವರಠಾಕೂರ್ ರವರು ಶಿಲಾನ್ಯಾಸ ನೆರವೇರಿಸಿದ್ದರು.

ಹುತಾತ್ಮ ಯೋಧರಿಗೆ ಗೌರವ ಸಲ್ಲಿಸುವುದರ ಜೊತೆಗೆ, ರಾಷ್ಟ್ರೀಯ ಸೈನಿಕ ಸ್ಮಾರಕ ನಮ್ಮ ರಾಜ್ಯದ ಮಕ್ಕಳಿಗೆ ಮತ್ತು ಯುವ ಪೀಳಿಗೆಗೆ ಒಂದು ಸ್ಫೂರ್ತಿಯ ಸೆಲೆಯಾಗಿದೆ. ವಿಧಾನ ಸೌಧ, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ನೆಹರೂ ತಾರಾಲಯ ಸೇರಿದಂತೆ ನಗರದ ಪ್ರಮುಖ ಸ್ಥಳಗಳಿಗೆ ಹೊಂದಿಕೊಂಡಂತಿರುವ ರಾಷ್ಟ್ರೀಯ ಸೈನಿಕ ಸ್ಮಾರಕ ನಮ್ಮ ರಾಜ್ಯದ ಮಕ್ಕಳು ಮತ್ತು ಯುವ ಪೀಳಿಗೆಗೆ ಯೋಧರ ರಾಷ್ಟ್ರಪ್ರೇಮ, ಶೌರ್ಯ ಮತ್ತು ತ್ಯಾಗ-ಬಲಿದಾನಗಳ ಬಗ್ಗೆ ಅರಿವು ಮೂಡಿಸಿ ಅವರೂ ಆ ಗುಣಗಳನ್ನು ಮೈಗೂಡಿಸಿಕೊಳ್ಳಲು ಸ್ಫೂರ್ತಿತುಂಬುತ್ತದೆ.

ಯೋಜನೆಯ ರೂಪುರೇಷೆ ನಿರ್ಧರಿಸಿ ಶಿಲಾನ್ಯಾಸ ಕೈಗೊಂಡ ಹಲವಾರು ವರ್ಷಗಳ ನಂತರವೂ ಕಾರಣಾಂತರಗಳಿಂದ ಈ ಯೋಜನೆ ಇನ್ನೂ ಅಪೂರ್ಣ ಸ್ಥಿತಿಯಲ್ಲಿದೆ. ಹುತಾತ್ಮ ಯೋಧರ ಸ್ಮರಣಾರ್ಥವಾಗಿ 6 ವರ್ಷಗಳ ಹಿಂದೆಯೇ ನಿಯೋಜಿಸಲಾಗಿದ್ದ ವೀರಗಲ್ಲುಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಇನ್ನೂ ಸ್ಮಾರಕದಲ್ಲಿ ಸ್ಥಾಪಿಸಿಲ್ಲ.

ಸ್ಮಾರಕದ ಕಾಮಗಾರಿಯಲ್ಲಿ ಆಗುತ್ತಿರುವ ವಿಳಂಬ ಮತ್ತು ಅದರ ಶೋಚನೀಯ ಪರಿಸ್ಥಿತಿಯ ಕುರಿತು ಹಿಂದಿನ ಸರ್ಕಾರಗಳಿಗೆ ಅನೇಕ ಸಂದರ್ಭಗಳಲ್ಲಿ ಹಲವಾರು ಪತ್ರ ಬರೆದಿದ್ದೇನೆ. ಸೇನಾ ಪಡೆಗಳ ಮತ್ತು ಹುತಾತ್ಮಯೋಧರ ಸೇವೆ ಮತ್ತು ತ್ಯಾಗದ ಬಗ್ಗೆ ಸರ್ಕಾರದ ನಿರಂತರ ನಿರ್ಲಕ್ಷ್ಯ, ಅಸಡ್ಡೆ ಮತ್ತು ಅಗೌರವವನ್ನು ಕಂಡು ಬೇಸತ್ತು ನಾನು ಜೂನ್ 2015ರಲ್ಲಿ ರಾಷ್ಟ್ರೀಯ ಸೈನಿಕ ಸ್ಮಾರಕಯೋಜನಾ ಸಮಿತಿ ಮತ್ತು ನಿರ್ವಹಣಾದತ್ತಿಗೆ ರಾಜೀನಾಮೆ ಸಲ್ಲಿಸಿದೆ.




11ನೇ ಮಹಡಿ, ದೊಡ್ಡ ಗೋಪುರ, ಸರ್ ಎಂ. ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು - 560 001.

ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680

ಅಂತರ್ಜಾಲ ವಿಳಾಸ : rajeev.c@nic.in

www.rajeev.in / ham:VU2RCL

सत्यमेव जयते

ಸ್ಮಾರಕದ ಮತ್ತು ಅಲ್ಲಿ ಪ್ರದರ್ಶನಕ್ಕಿರುವ ಫಿರಂಗಿಗಳು ಮತ್ತು ಸ್ಥಗಿತಗೊಳಿಸಲಾದ ಶಸ್ತ್ರಾಸ್ತ್ರಗಳ ಶೋಚನೀಯ ಪರಿಸ್ಥಿತಿ ಬಗ್ಗೆ ನಿವೃತ್ತ ಯೋಧರು ಮತ್ತು ನಾಗರೀಕರು ಹಲವಾರು ಬಾರಿ ದೂರು ಸಲ್ಲಿಸಿದ್ದಾರೆ. ಕಟ್ಟಡ ಮತ್ತು ಅಲ್ಲಿರುವ ಅಮೂಲ್ಯ ಸ್ಮಾರಕಗಳು ಸೋರಿಕೆಯಿಂದಾಗಿ ನಶಿಸುತ್ತಿವೆ. 24,000ಕ್ಕೂ ಹೆಚ್ಚಿನ ಹುತಾತ್ಮಯೋಧರ ಹೆಸರುಗಳ ಕೆತ್ತನೆ ಇರುವ ಸ್ಮಾರಕವನ್ನು ಸಮರ್ಪಕವಾಗಿ ನಿರ್ವಹಿಸಲಾಗುತ್ತಿಲ್ಲ. ಕಳೆದ ಹತ್ತು ವರ್ಷಗಳಿಂದ ಈ ಯೋಜನೆಯಲ್ಲಿ ಭಾವನಾತ್ಮಕವಾಗಿ ತೊಡಗಿಸಿಕೊಂಡಿರುವ ನಾನು ಸಾಕಷ್ಟು ಹಣ ಮತ್ತು ಸಮಯವನ್ನು ಮೀಸಲಿಟ್ಟಿದ್ದೇನೆ. ಆದ್ದರಿಂದ ಸಹಜವಾಗಿ ಸ್ಮಾರಕದ ದಯನೀಯ ಸ್ಥಿತಿಯನ್ನು ಕಂಡು ನಿರಾಶೆಗೊಂಡಿದ್ದೇನೆ.

ಈ ಸೈನಿಕ ಸ್ಮಾರಕ ಯೋಜನೆಯಂತೆ ಪೂರ್ಣಗೊಂಡರೆ ಸ್ವತಂತ್ರ ಭಾರತದ ಇತಿಹಾಯಾಸದಲ್ಲೇ ಮೊಟ್ಟ ಮೊದಲ ಮಾದರಿ ಸೈನಿಕ ಸ್ಮಾರಕವಾಗುತ್ತದೆ ಮತ್ತು ನಾಗರೀಕರೆಲ್ಲರೂ ಅಂತಹ ಒಂದು ಹೆಮ್ಮೆಯ ಮತ್ತು ಭಾರತದ ಪ್ರಪ್ರಥಮ ಸೈನಿಕ ಸ್ಮಾರಕದಲ್ಲಿ ತಮ್ಮ ಗೌರವ ಸಲ್ಲಿಸಲು ಎದುರು ನೋಡುತ್ತಿದ್ದಾರೆ.

ಈ ಯೋಜನೆಯ ಪ್ರಾಮುಖ್ಯತೆ ಮತ್ತು ಪ್ರತಿಷ್ಠೆಯನ್ನು ಗಮನದಲ್ಲಿಟ್ಟುಕೊಂಡು ರಾಷ್ಟ್ರೀಯ ಸೈನಿಕ ಸ್ಮಾರಕ ನಿರ್ವಹಣಾದತ್ತಿಯ ಅಧ್ಯಕ್ಷರಾದ ಮಾನ್ಯ ಮುಖ್ಯಮಂತ್ರಿಗಳಲ್ಲಿ ಒತ್ತಾಯಿಸುವುದೇನೆಂದರೆ,

1. ವೈಯಕ್ತಿಕ ಆಸಕ್ತಿ ವಹಿಸಿ ಈ ಯೋಜನೆಯನ್ನುತ್ವರಿತವಾಗಿ ಪೂರ್ಣಗೊಳಿಸಿ
2. ಸ್ಮಾರಕ ಮತ್ತು ಅಲ್ಲಿ ಪ್ರದರ್ಶನಕ್ಕಿಟ್ಟಿರುವ ಅಪರೂಪದ ಸಂಗ್ರಹಗಳಿಗೆ ಸೂಕ್ತ ಭದ್ರತೆ ಒದಗಿಸಿ
3. ವಿಳಂಬ ಮಾಡದೆ ಯೋಜನೆಯನ್ನು ಉದ್ಘಾಟಿಸಿ ಸಾರ್ವಜನಿಕರಿಗೆ ಅರ್ಪಿಸಿ

ನಿಮ್ಮ ಪ್ರತಿಕ್ರಿಯೆಗೆ ನಾನು ಎದುರು ನೋಡುತ್ತೇನೆ.

ನಿಮ್ಮ ವಿಶ್ವಾಸಿ,

**ರಾಜೀವ್‌ಚಂದ್ರಶೇಖರ್**

**ಶ್ರೀ ಎಚ್.ಡಿ.ಕುಮಾರಸ್ವಾಮಿ**
ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ, ಬೆಂಗಳೂರು

ಪ್ರತಿ:

**ಡಾ. ಜಿ. ಪರಮೇಶ್ವರ,** ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು